ಅಸಲು ದಾವೆ ಸಂ: 24/2023

ಪಿ.ಡಬ್ಲು-1

ದಿ: 27-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ವಾದಿ ಪರ **ಶ್ರೀ ಎ ಟಿ ಬಿ ವಕೀಲರ ಪರವಾಗಿ ಶ್ರೀ ಮಲ್ಲಿಕಾರ್ಜುನ ವಕೀಲರಿಂದ**:

ಈ ದಾವೆಯಲ್ಲಿ ನಾನು ವಾದಿಯಾಗಿದ್ದು ಇಂದು ನನ್ನ ಮೌಖಿಕ ಸಾಕ್ಷದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತವೆ. ಅವುಗಳನ್ನು ತಿಳಿದುಕೊಂಡು ನಾನು ಹೆಬ್ಬಟ್ಟಿನ ಗುರುತು ಹಾಕಿರುತ್ತೇನೆ.

ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಹಾಳ ಜಾಡಲದಿನ್ನಿ ಗ್ರಾಮದ ಸರ್ವೆ ನಂಬರ್ 94, 95/2, ಎರಡು ಪಹಣಿಗಳನ್ನು ನಿ ಪಿ 1 ಮತ್ತು 2 ಎಂದು, ಜಾಡಲದಿನ್ನಿ ಗ್ರಾಮದ ನಕಾಶೆಯ ದೃಢೀಕೃತ ನಕಲನ್ನು ನಿ ಪಿ 3 ಎಂದು, ಭೂಮಾಪಕರು ಅಳತೆ ಮಾಡುವ ಕಾಲಕ್ಕೆ ನೀಡಿದ ನಿವೇದನೆ, 02 ನೋಟಿಸ್, ಮಹಜರ, ಸ್ಕೆಚ್ ಇವುಗಳ ದೃಢೀಕೃತ ಪ್ರತಿಗಳನ್ನು ನಿ ಪಿ 4 ರಿಂದ 8 ಎಂದು, ದಿನಾಂಕ: 07-03-2023 ರಂದು ತಹಶೀಲ್ದಾರರವರಿಗೆ ಸಲ್ಲಿಸಿದ ಅರ್ಜಿಯನ್ನು ನಿ ಪಿ 9 ಎಂದು, ಟೊಂಚ ನಕಾಶೆಯನ್ನು ನಿ ಪಿ 10 ಎಂದು, ಗ್ರಾಮ ನಕಾಶೆಯ ದೃಢೀಕೃತ ನಕಲು ಪ್ರತಿಯನ್ನು ನಿ ಪಿ 11 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿಯರ ವಕೀಲರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ